ಒ.ಎಸ್. ನಂಬರ್ಃ 89/2022
ಪಿಡಬ್ಲ್ಯೂಃ 2
ದಿನಾಂಕಃ 27.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ ಪಿ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನನ್ನ ರುಜುವನ್ನು ಹಾಕಿದ್ದೇನೆ. ನಿಪಿ 1 ಕ್ಕೆ ಸಾಕ್ಷಿದಾರನಾಗಿ ನಾನು ಸಹಿ ಮಾಡಿದ್ದು , ನನ್ನ ಜೊತೆ ಕೃಷ್ಣಪ್ಪ ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತಾರೆ. ನನ್ನ ಸಹಿಯನ್ನು ನಿಪಿ 1 ಎ , ಕೃಷ್ಣಪ್ಪನವರ ಸಹಿಯನ್ನು ನಿಪಿ 1 ಬಿ , ರಾಮರೆಡ್ಡಿಯವರ ಒಟ್ಟು 4 ಹೆಬ್ಬೆಟ್ಟಿನ ಗುರುತುಗಳನ್ನು ನಿಪಿ 1 ಸಿ ಯಿಂದ ಎಫ್ ಎಂದು , ವಾದಿಯ ಸಹಿಯನ್ನು ನಿಪಿ 1 ಜಿ ಎಂದು, ಪತ್ರ ಬರಹಗಾರರ ಸಹಿಯನ್ನು ನಿಪಿ 1 ಎಚ್ ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**(ರಹೀಮಾಲಿ ಎಮ್ ನದಾಫ್)**
**ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ**
**ಕೆಜಿಎಫ್ (ಸಂಚಾರಿ ಪೀಟಃ ಬಂಗಾರಪೇಟೆ).**

ಒ.ಎಸ್. ನಂಬರ್ಃ 89/2022
ಪಿಡಬ್ಲ್ಯೂಃ 1
ದಿನಾಂಕಃ 27.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ ಪಿ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನನ್ನ ರುಜುವನ್ನು ಹಾಕಿದ್ದೇನೆ. ದಿನಾಂಕ 07.12.2020 ರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ1 ಎಂದು , ದಾವಾ ಸ್ವತ್ತಿಗೇ ಸಂಬಂಧ ಪಟ್ಟ ಒಂದು ಆರ್ ಟಿ ಸಿ , ದಿನಾಂಕ 26.04.2022 ರ ಲೀಗಲ್ ನೋಟೀಸ್ , ಅಂಚೆ ರಶೀದಿ , ಅಂಚೆ ಸ್ವೀಕೃತಿ , ಸದರಿ ನೋಟೀಸ್ ಗೆ ನೀಡಿದ ಪ್ರತಿವಾದಿ ನೀಡಿದ ಪ್ರತ್ಯುತ್ತರ ಇವುಗಳನ್ನು ನಿಪಿ 2 ರಿಂದ 6 ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ಪ್ರತಿವಾದಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಸಾಕ್ಷಿದಾರರಾಗಿ ರಘುಪತಿ ಮತ್ತು ಕೃಷ್ಣಪ್ಪ ಎನ್ನುವವರು ಸಹಿ ಮಾಡಿರುತ್ತಾರೆ . ಕೃಷ್ಣಪ್ಪ ಪ್ರತಿವಾದಿಯ ಅಳಿಯನಾಗಿರುತ್ತಾನೆ. ಸದರಿ ನಿಪಿ 1 ಕ್ಕೆ ನಾನು ಸಹ ಖರೀದಿದಾರನಾಗಿ ಸಹಿ ಮಾಡಿರುತೇನೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ರಹೀಮಾಲಿ ಎಮ್ ನದಾಫ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಟಃ ಬಂಗಾರಪೇಟೆ).